**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ– 225/2023**

ಪಿ.ಡಬ್ಲ್ಯೂಃ– 9
ಸಿ.ಡಬ್ಲ್ಯೂಃ– 10

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸುರೇಶ |
| ತಂದೆಯ ಹೆಸರುಃ | : | ದಾಸೇಗೌಡ |
| ವಯಸ್ಸುಃ | : | 58 ವರ್ಷ |
| ವೃತ್ತಿಃ | : | ವ್ಯವಸಾಯ |
| ವಾಸಃ | : | ಕಲ್ಲಳ್ಳಿ ಗ್ರಾಮ, ಹೊಳೇನರಸೀಪುರ ತಾಃ. |

**ದಿನಾಂಕಃ 14–08–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತ ಚಂದ್ರಮೌಳಿ ಗೊತ್ತು. ಆರೋಪಿ ನಮ್ಮ ಊರಿನ ಅಳಿಯ. ಮೃತ ಅಂಬಿಕಾ ರವರು ಹಾಸನದ ಗಾರ್ಮೆಂಟಿನಲ್ಲಿ ಕೆಲಸ ಮಾಡುತ್ತಿದ್ದಳು. 2 ವರ್ಷದ ಹಿಂದೆ ಅಂಕನಹಳ್ಳಿ ಫಾರೆಸ್ಟಿಲ್ಲಿ ಆರೋಪಿತನ ಪತ್ನಿ ಅಂಬಿಕಾ ರವರ ಕೊಲೆ ಆಗಿರುತ್ತದೆ. ವಿಷಯ ತಿಳಿದ ನಾನು ಅಂಕನಹಳ್ಳಿ ಗ್ರಾಮದ ಫಾರೆಸ್ಟಿಗೆ ಹೋಗಿ ಮೃತ ಅಂಬಿಕಾ ರವರ ಶವವನ್ನು ನೋಡಿರುತ್ತೇನೆ. ಮೃತ ಅಂಬಿಕಾರವರ ಮುಖ ಹಾಗೂ ತಲೆಗೆ ಗಾಯ ಆಗಿತ್ತು. ಪೊಲೀಸರು ಮೃತ ಅಂಬಿಕಾ ರವರ ಶವದ ಮೇಲೆ ಅಂಕನಹಳ್ಳಿ ಗ್ರಾಮದ ಫಾರೆಸ್ಟಿನಲ್ಲಿ ಶವತನಿಖಾ ವರದಿಯನ್ನು ತಯಾರಿಸಿದ ಕಾಲದಲ್ಲಿ ನಾನು ಹಾಜರಿದ್ದು ನನ್ನ ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಶವತನಿಖಾ ವರದಿಯನ್ನು ಈಗಾಗಲೇ ನಿಪಿ–25 ಎಂದು ಗುರುತಿಸಲಾಗಿದ್ದು, ನಿಪಿ–25 ರಲ್ಲಿ ಸಾಕ್ಷಿದಾರರು

ಗುರುತಿಸಿದ ಅವರ ಸಹಿಯನ್ನು ನಿಪಿ–25(ಬಿ)ಎಂದು ಗುರುತಿಸಲಾಯಿತು. ಪೊಲೀಸರು ಮೃತ ಅಂಬಿಕಾ ರವರ ಶವ ಅಂಕನಹಳ್ಳಿ ಫಾರೆಸ್ಟಿನಲ್ಲಿ ಬಿದ್ದಿರುವ ಬಗ್ಗೆ ಫೋಟೋಗಳನ್ನು ಸಹ ತೆಗೆದಿರುತ್ತಾರೆ. ಈಗ ನಾನು ನೋಡುತ್ತಿರುವ ನಿಪಿ–9 ರಿಂದ 12 ಫೋಟೋಗಳು ಪೊಲೀಸರು ಶವತನಿಖಾ ವರದಿ ಕಾಲದಲ್ಲಿ ತೆಗೆದಿರುವ ಫೋಟೋಗಳು ಆಗಿರುತ್ತವೆ. ನಿಪಿ–12 ಫೋಟೋವಿನಲ್ಲಿ ಸಾಕ್ಷಿದಾರರು ತಮ್ಮ ಇರುವಿಕೆಯನ್ನು ಹಾಗೂ ಪ್ರಾಸಾ–8 ದಾಕ್ಷಾಯಿಣಿ ಹಾಗೂ ಮಹೇಶ್ ಎಂಬುವವರ ಇರುವಿಕೆಯನ್ನು ಗುರುತಿಸಿರುತ್ತಾರೆ. ಮೃತ ಅಂಬಿಕಾ ಹಾಗೂ ಆಕೆಯ ಗಂಡನಾದ ಆರೋಪಿಯ ನಡುವೆ ಆಗಾಗ ಗಲಾಟೆ ಹಾಗೂ ಜಗಳ ಆಗುತ್ತಿತ್ತು. ಅಂಬಿಕಾ ಹಾಸನದ ಗಾರ್ಮೆಂಟಿಗೆ ಹೋಗಿದ್ದು ಅಲ್ಲಿಂದ ಆಕೆ ಅಂಕನಹಳ್ಳಿ ಫಾರೆಸ್ಟಿನಲ್ಲಿ ಕೊಲೆ ಆಗಿರುತ್ತಾಳೆ ಎಂದು ತಿಳಿದು ಬಂತು. ಮೃತ ಅಂಬಿಕಾ ರವರನ್ನು ಯಾರು ಕೊಲೆ ಮಾಡಿರುತ್ತಾರೆ ಎಂದು ನನಗೆ ತಿಳಿದು ಬರಲಿಲ್ಲ. ಆರೋಪಿತ ಆತನ ಪತ್ನಿ ಅಂಬಿಕಾ ರವರನ್ನು ಕೊಲೆ ಮಾಡಿರಬಹುದು ಎಂದು ಪೊಲೀಸರು ಆತನನ್ನು ಬಂಧಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿ ಪರ ಡಿಫೆನ್ಸ್ ಕೌನ್ಸಿಲ್ ರವರಿಂದ</u>**

2. ಅಂಬಿಕಾ ರವರ ಸಂಸಾರದ ವೈಯಕ್ತಿಕ ವಿಚಾರಗಳ ಬಗ್ಗೆ ನನಗೆ ತಿಳಿದಿಲ್ಲ ಎಂದರೆ ಸರಿ. ಆರೋಪಿ ಹಾಗೂ ಅಂಬಿಕಾ ರವರ ಸಂಸಾರದ ಜೀವನದ ಬಗ್ಗೆ ನನಗೆ ತಿಳಿದಿರಲಿಲ್ಲ ಎಂದರೆ ಅವರ ನಡುವೆ ಆಗಾಗ ಜಗಳ ಆಗುತ್ತಿತ್ತು. ಅಂಬಿಕಾ ರವರು ಆರೋಪಿತ ಆಕೆಗೆ ಹಿಂಸೆ ನೀಡುತ್ತಿದ್ದಾನೆ ಎಂದು ನಮ್ಮಲ್ಲಿ ಹೇಳುತ್ತಿದ್ದಳು. ನಮ್ಮ ಜಮೀನಿನ ಪಕ್ಕದಲ್ಲಿಯೇ ಅಂಬಿಕಾ ರವರ ತಂದೆಯ ಜಮೀನು ಇರುತ್ತದೆ. ಅಂಬಿಕಾ ರವರು ಬೆಳಿಗ್ಗೆ ಗಾರ್ಮೆಂಟಿಗೆ ಹೋಗಿ ಸಂಜೆ ವಾಪಸ್ ಬರುತ್ತಿದ್ದು ಆಕೆಯ ಸಂಸಾರದ ವಿಚಾರದ ಬಗ್ಗೆ ನನಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. 2023 ರಲ್ಲಿ ಒಂದು ದಿನ ಅಂಬಿಕಾ ರವರ ಕೊಲೆ

ಆಗಿರುತ್ತದೆ ಎಂದು ತಿಳಿದು ಬಂದ ಮೇರೆಗೆ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಮ್ಮ ಊರಿನ ಜನರ ಮೂಲಕ ನನಗೆ ಅಂಬಿಕಾ ರವರ ಕೊಲೆಯ ಬಗ್ಗೆ ತಿಳಿದು ಬಂದಿರುತ್ತದೆ. ಸಂಜೆ ಸುಮಾರು 5 ಗಂಟೆ ಸಮಯಕ್ಕೆ ನಾನು ಸ್ಥಳಕ್ಕೆ ಹೋಗಿರಬಹುದು. ರಾತ್ರಿ ಸುಮಾರು 7 ಗಂಟೆಯವರೆಗೆ ನಾನು ಸ್ಥಳದಲ್ಲಿರಬಹುದು. ಸುಮಾರು 5.30 ರಿಂದ 6 ಗಂಟೆ ಸಮಯಕ್ಕೆ ಪೊಲೀಸರು ಆರೋಪಿಯನ್ನು ಸ್ಥಳಕ್ಕೆ ಕರೆತಂದು ಮಹಜರ್ ಬರೆದಿರುತ್ತಾರೆ. ಪೊಲೀಸರು ಸ್ಥಳದಲ್ಲಿ ಬರೆದ ಮಹಜರಿನಲ್ಲಿ ಏನು ಬರೆದಿದೆ ಎಂಬುದು ನನಗೆ ತಿಳಿದಿಲ್ಲ ಎಂದರೆ ಸರಿ. ನಾನು ಅಂಕನಹಳ್ಳಿ ಫಾರೆಸ್ಟಿಗೆ ಹೋಗಿಲ್ಲ ಹಾಗೂ ಪೊಲೀಸರು ನನ್ನ ಸಮಕ್ಷಮ ಯಾವುದೇ ಶವತನಿಖಾ ವರದಿಯನ್ನು ತಯಾರಿಸಿ ನನ್ನ ಸಹಿಯನ್ನು ಪಡದಿಲ್ಲ ಎಂದರೆ ಸರಿಯಲ್ಲ. ನಾನು ಶವತನಿಖಾ ವರದಿಗೆ ಪೊಲೀಸ್ ಠಾಣೆಯಲ್ಲಿ ನನ್ನ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಮೃತ ಅಂಬಿಕಾ ನಮ್ಮ ಊರಿನವಳಾದ ಕಾರಣ ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.